ಬಲಾಢ್ಯರು ಇವರನ್ನು ಇಂದಿಗೂ ಹೆದರಿಸುತ್ತಿದ್ದಾರೆ. ಪ್ರಯುಕ್ತ ಸರ್ಕಾರ ಈ ಬಾವಿಗಳನ್ನು ಮುಕ್ತಗೊಳಿಸಿ ಜನತೆಗೆ ಇವುಗಳ ಸೇವೆ ದೊರೆಯುವಂತೆ ಮಾಡಲು ಯತ್ನಿಸುವುದೇ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಪತಿಗಳೇ, ಈ ಬಗ್ಗೆ ಈಗಾಗಲೇ ಹೇಳಿದ್ದೇನೆ. ಮಾನ್ಯ ವೆಂಕಟರಾಮಯ್ಯನವರು ಮತ್ತು ಬೇರೆ ಬೇರೆಯವರು ನೋಟೀಸ್ ಕೊಟ್ಟಿದ್ದಾರೆ. ಮಂಗಳವಾರ ವಿವರವಾದ ಹೇಳಿಕೆಯನ್ನು ಕೊಡುತ್ತೇನೆ.

[೧೦] ಹೊಸದುರ್ಗ ತಾಲ್ಲೂಕು ಕಸಬಾ ಹೋಬಳಿ ಕಬ್ಬಳ-ನಾಗೇರಕಟ್ಟೆ ಪರಿಶಿಷ್ಟ ವರ್ಗದವರ ಮೇಲೆ ನಡೆದಿರುವ ಹಲ್ಲೆ

ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಅಧ್ಯಕ್ಷರೇ, ಹೊಸದುರ್ಗ ತಾಲ್ಲೂಕಿನ ಕಸಬಾ ಹೋಬಳಿಯಲ್ಲಿನ ಗ್ರಾಮಗಳಾದ ಕಬ್ಬಳ, ನಾಗರಕಟ್ಟೆ ಮತ್ತು ಹೆಬ್ಬಳ್ಳಿಯಲ್ಲಿ ಜೀವನ ಮಾಡುತ್ತಿರುವ ಪರಿಶಿಷ್ಟ ವರ್ಗದವರು ಗೋಮಾಳವನ್ನು ಬಗರ್ ಹುಕುಂನಲ್ಲಿ ಸಾಗು ಮಾಡಿ ಬಿತ್ತನೆ ಮಾಡಿದ್ದಾರೆ. ಬೆಳೆದು ನಿಂತಿದ್ದ ಪೈರನ್ನು ಬಲಾಢ್ಯ ಕೋಮು ಜನಗಳು ದೌರ್ಜನ್ಯ ಪೂರ್ವಕವಾಗಿ ದನಕರುಗಳನ್ನು ಬಿಟ್ಟು ಮೇಯಿಸಿದ್ದಾರೆ. ಇದು ಅನ್ಯಾಯವೆಂದಿದ್ದಕ್ಕೆ ಈ ಜನರ ಮೇಲೆ ಅಮಾನುಷವಾಗಿ ಹಲ್ಲೆ ನಡೆಸಿದ್ದಾರೆ. ಇದರಿಂದ ಭೀತಗ್ರಸ್ಥರಾಗಿ ರಕ್ಷಣೆಗೆ ಎಲ್ಲಿ ಹೋದರೂ, ರಕ್ಷಣೆ ದೊರೆಯುತ್ತಿಲ್ಲ. ಸರ್ಕಾರ ಪರಿಶಿಷ್ಟ ಜಾತಿಯವರ ಮೇಲಿನ ದೌರ್ಜನ್ಯವನ್ನು ಅತಿ ಗಂಭೀರವಾಗಿ ಪರಿಗಣಿಸಿ ಎಷ್ಟೇ ಪ್ರಭಲವಿದ್ದರೂ ಕಾನೂನು ರೀತಿಯಲ್ಲಿ ಕ್ರಮ ಜರುಗಿಸುವುದೆಂಬ ಆದೇಶ ಹೊಸಿಯೇ? ಕೂಡಲೇ ಸರ್ಕಾರ ಈ ಜನತೆಗೆ ರಕ್ಷಣೆ ಮತ್ತು ಸಾಗುವಳಿ ಮುಂದುವರಿಸಲು ಕ್ರಮ ಜರುಗಿಸಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಈ ಜಮೀನು ಸರ್ಕಾರಿ ಗೋಮಾಳವಾಗಿದೆ. ಇಲ್ಲಿ ಬೇರೆಯವರು ಜಮೀನಿಲ್ಲದೇ ಇದ್ದವರು ಉಳುಮೆ ಮಾಡಿಕೊಂಡು ಬೆಳೆಯನ್ನು ತೆಗೆಯುತ್ತಿದ್ದಾರೆ. ಇದಕ್ಕೆ ಬೇರೆಯವರು ಬಂದು ಆ ಬೆಳೆಯನ್ನು ನಾಶ ಮಾಡಿದ್ದಾರೆ. ಆದ್ದರಿಂದ ಇವತ್ತು ಆನ್-ಆಥರೈಸ್ಡ್ ಕಲ್ಟಿವೇಷನ್ ಎಲ್ಲೆಲ್ಲಿ ಮಾಡಿದ್ದಾರೆ, ಅದನ್ನು ನಾವು ಯಾರಿಗೆ ಕನ್‌ಫರ್ಮ್ ಮಾಡಬೇಕಾಗಿದೆ ಎನ್ನುವುದಕ್ಕೆ ಈಗಾಗಲೇ ಬಿಲ್ ಜಾರಿಗೆ ಬಂದಿದೆ. ಯಾರಿಗೆ ಅನ್ಯಾಯವಾಗಿದೆ, ಅವರಿಗೆ ನ್ಯಾಯ ದೊರಕಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

(೧೧) ರಾಜ್ಯದಲ್ಲಿ ಪೌರ ಕಾರ್ಮಿಕರ ಅಭಿವೃದ್ಧಿ ಮಂಡಲಿಯನ್ನು ಸ್ಥಾಪಿಸುವುದು

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ೩೯ ವರ್ಷಗಳು ಕಳೆದರೂ ಕರ್ನಾಟಕದಲ್ಲಿ ಪೌರ ಕಾರ್ಮಿಕರ ಜೀವನ ಮಟ್ಟ ರಾಜಕೀಯವಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸುಧಾರಣೆಯಾಗಿಲ್ಲ. ನಗರಗಳಲ್ಲಿ ನಾಗರೀಕರ ಆರೋಗ್ಯವನ್ನು ಕಾಪಾಡುವ ಹೊಣೆ ಹೊತ್ತಿರುವ ಈ ಜನರು ಇನ್ನೂ ಶೋಷಣೆಗೆ ಒಳಗಾಗಿದ್ದಾರೆ. ಈ ದಲಿತ ಜನಾಂಗವನ್ನು ಹರಿಜನರ ಪಂಗಡಕ್ಕೆ ಸೇರಿಸಿರುವುದು ಸರಿಯಷ್ಟೆ. ಆದರೆ ಇದರಿಂದ ಸಿಕ್ಕಬೇಕಾದ ಸೌಲಭ್ಯ ಈ ಜನಾಂಗಕ್ಕೆ ಸೂಕ್ತವಾದ ರೀತಿಯಲ್ಲಿ ಸಿಗದೇ ಇವರು ಇನ್ನೂ ಹಿಂದುಳಿದಿದ್ದಾರೆ. ಶೈಕ್ಷಣಿಕವಾಗಿ ಇರುವ ಹಿಂದುಳಿದಿರುವ ಕಾರಣ ದೊರಕುವ ಸೌಲಭ್ಯಗಳನ್ನು ಅನುಭವಿಸಿದಂತಹ ಅವಕಾಶವಿಲ್ಲ, ಈ ಕಾರಣ ಇವರ ಸರ್ವ ರೀತಿಯ ಅಭಿವೃದ್ಧಿಯನ್ನು ಸಾಧಿಸುವ ಸಲುವಾಗಿ ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ಪೌರ ಕಾರ್ಮಿಕರ ಅಭಿವೃದ್ಧಿ ಮಂಡಲಿಯನ್ನು ಸ್ಥಾಪಿಸಬೇಕೆಂದು ಒತ್ತಾಯಿಸಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ತೀಪ್ರವಾಗಿ ಯೋಚನೆ ಮಾಡುತ್ತೇವೆ.

(೧೨) ಬ್ರಹ್ಮಾವರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಹಿಳಾ ವೈದ್ಯರುಗಳು ಇಲ್ಲದಿರುವುದು

ಶ್ರೀ ಬಸವರಾಜ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ಬ್ರಹ್ಮಾವರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವು ಪರಿಸರದ ಹಳ್ಳಿಗಳಿಗೆ ವೈದ್ಯಕೀಯ ನೆರವನ್ನು ನೀಡುವ ಒಂದೇ ಆಸ್ಪತ್ರೆ

ಯಾಗಿರುತ್ತದೆ. ಈ ಆಸ್ಪತ್ರೆಯಲ್ಲಿ ಕಳೆದ ಒಂದೂವರೆ ವರ್ಷಗಳಿಂದ ಮಹಿಳಾ ವೈದ್ಯರು ಇಲ್ಲದೆ ಇರುವುದು ರೋಗಿಗಳಿಗೆ ವಿಶೇಷವಾಗಿ ಮಹಿಳಾ ರೋಗಿಗಳಿಗೆ ತೊಂದರೆಯುಂಟಾಗಿದೆ. ಈ ಆಸ್ಪತ್ರೆಗೆ ದಿನಂಪ್ರತಿ ೧೫೦ಕ್ಕೂ ಹೆಚ್ಚು ಹೊರರೋಗಿಗಳು ಬರುತ್ತಿದ್ದು ಅವರನ್ನು ಒಬ್ಬರೇ ವೈದ್ಯರು ತಪಾಸಣೆ ನಡೆಸುವುದು ಕಷ್ಟಸಾಧ್ಯವಾಗಿದೆ. ಅಲ್ಲದೆ ಇತ್ತೀಚೆಗೆ ಈ ಆಸ್ಪತ್ರೆಗೆ ಇಬ್ಬರು ವೈದ್ಯರ ನೇಮಕಾತಿ ಆಗಿದ್ದು ಅವರಿಬ್ಬರೂ ೨ ವರ್ಷಗಳ ರಜೆ ಹಾಕಿ ಹೋಗಿರುತ್ತಾರೆ. ಆದುದರಿಂದ ಬೇರೆ ಇಬ್ಬರು ವೈದ್ಯರನ್ನು ಅದರಲ್ಲಿ ಒಬ್ಬ ಮಹಿಳಾ ವೈದ್ಯರನ್ನು ಈ ಆಸ್ಪತ್ರೆಗೆ ಕೂಡಲೇ ನೇಮಕ ಮಾಡಿಸಬೇಕಾಗಿ ಆರೋಗ್ಯ ಸಚಿವರನ್ನು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಆಗಬಹುದು ಸ್ವಾಮಿ. ಆದಷ್ಟು ಬೇಗ ಮಹಿಳಾ ವೈದ್ಯಾಧಿಕಾರಿಯನ್ನು ಆ ಆಸ್ಪತ್ರೆಗೆ ಹಾಕುತ್ತೇನೆ. ಇನ್ನೊಂದು ಸಲಹೆಯನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಯಾರಾದರೂ ಮಹಿಳಾ ವೈದ್ಯಾಧಿಕಾರಿ ಅಲ್ಲಿಗೆ ಬಂದು ಕೆಲಸ ಮಾಡುತ್ತೇನೆ ಎಂದು ಮುಂದೆ ಬಂದರೆ, ಅದನ್ನು ನನಗೆ ತಿಳಿಸಿದರೆ ಇದರಿಂದ ನನಗೆ ಹೆಚ್ಚಿನ ಸಹಾಯವಾಗುತ್ತದೆ ಮತ್ತು ಅವರನ್ನು ಆ ಆಸ್ಪತ್ರೆಗೆ ಹಾಕಿಕೊಡುತ್ತೇನೆ.

ಶಾಸನ ರಚನಾ ಕಲಾಪಗಳು

೧೯೮೬ನೇ ಇಸವಿಯ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೬ನೇ ಇಸವಿಯ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''.

(ಪ್ರಸ್ತಾವ ಅಂಗೀಕರಿಸಲಾಯಿತು ಮತ್ತು ಅನುಮತಿ ನೀಡಲಾಯಿತು)

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

೧೯೮೬ನೇ ಇಸವಿಯ ಕರ್ನಾಟಕ ಇಲಾಖಾ ವಿಚಾರಣೆ (ಸಾಕ್ಷಿಗಳ ಹಾಜರಾತಿ, ದಾಖಲೆಗಳ ಒದಗಿಸುವಿಕೆ ಮತ್ತು ಇನ್ನಿತರ ಉಪಬಂಧಕಗಳು) ತಿದ್ದುಪಡಿ ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ವಿಧೇಯಕವನ್ನು ಮಂಡಿಸಬೇಕು.

SRI A. LAKSHMISAGAR.—On behalf of the Hon'ble Chief Minister I beg to move :

''That the Karnataka Departmental Enquiries (Enforcement of Attendence of Witnesses, Production of